ಕೋಟೆ. ಆದರೆ ಈಗ? ಸ್ವತಃ ಎಲ್ಲಿದ್ದೇನೆ ಎಂದು ತಿಳಿಯದ ಹೊಗೆಯ ಮೋಡದಲ್ಲಿ ಮುಳುಗಿದ ಕೋಟೆ. ಕಾರನ್ನು ಮತ್ತೊಮ್ಮೆ ಪರಿಶೀಲಿಸಿದೆ. ಬಾಡಿಗೆಗಿದೆ ಎಂದು ಹೇಳಲಾಗದ ಕಾರು- ಡ್ರೈವರನ ಮಾಹಿತಿಯಿಲ್ಲ, ದಾರಿಕಾಣಿಸುವ ದೊಡ್ಡ ಮಾನಿಟರ್ ಆಗಲೀ, ಕಾರ್ಡ್ ರೀಡರ್ ಆಗಲಿ ಪತ್ತೆಯಿಲ್ಲ, ಅಲ್ಲಲ್ಲಿ ತೇಪೆ ಹಚ್ಚಿದ ಸೀಟುಗಳು, ಏನನ್ನೋ ಮರೆಮಾಚುತ್ತಿರುವ ಗಂಧದೆಣ್ಣೆಯ ವಾಸನೆ; ಹೊರಟು ಆಗಲೇ ಅರ್ಧಗಂಟೆಯಾಗಿದ್ದರೂ ಇನ್ನೂ ಫ್ರೀವೇ ಬಂದಿರಲಿಲ್ಲ. ಸಂಶಯಿಸಲಿಕ್ಕೆ ಎದುರಿಗೇ ಇರುವ ಸಾಕ್ಷಿಗಳು. ಆದರೆ ಅಲ್ಲಿಯವರೆಗೆ, ನಡುರಾತ್ರಿಯಲ್ಲಿ ಕಾರು ಹತ್ತುವಾಗ, ಅದರ ನಂತರವೂ ಇವಾವುದನ್ನೂ ಗಮನಿಸಿಯೇ ಇರಲಿಲ್ಲ. ಛೇ! ನಾನು ಎಚ್ಚರಿಕೆಯಿಂದ ಇರಬೇಕಿತ್ತು. ಅವ ಬೇರೆ ಆಗಾಗ ಹಿಂದೆ ಇಣುಕುತ್ತಿದ್ದ. ಅವನಿಗೆ ನನ್ನ ಸಂಶಯದ ಗುಟ್ಟು ಬಿಟ್ಟುಕೊಡಬಾರದು ಎಂದುಕೊಂಡೆ.

'ಇಲ್ಲ, ನೆಟ್‌ವರ್ಕ್ ಸಿಗ್ತಾ ಇಲ್ಲ. ಫೋನಿನ ಚಾರ್ಜ್ ಬೇರೆ ಹೋಗ್ತಾ ಇದೆ. ಇನ್ನೂ ಎಷ್ಟು ಸಮಯ ಬೇಕು? ನಾವೆಲ್ಲಿದ್ದೀವಿ ಈಗ?'

'ಅಜ್ಜಿ, ಎಲ್ಲಿಯೇ ಇದ್ದರೂ ನೀವೀಗ ಸುರಕ್ಷಿತವಾಗಿದ್ದೀರಿ. ಬೆಳಗಾಗುವುದರೊಳಗೆ ಮನೆ ಮುಟ್ಟುತ್ತೀರಿ'

ಅವನ ಮುಖದ ಮೇಲೆ ಮಾಸದ ನಗು! ಅದನ್ನು ಕಂಡು ನನಗೋ ಇನ್ನಷ್ಟು ಹೆದರಿಕೆ. ಎಲ್ಲಿದ್ದೇವೆಂದು ಅವನು ಹೇಳದಿರುವುದರ ಹಿಂದಿನ ಕಾರಣವೇನಿರಬಹುದು? ಮತ್ತೆ ಅದೇ ಪ್ರಶ್ನೆ ಕೇಳಿದರೆ ಅವನಿಗೆ ಸಂಶಯ ಬರಬಹುದು.

ನನ್ನ ಅದೃಷ್ಟವೆನ್ನುವಂತೆ ಕೆಲವು ಕ್ಷಣಗಳ ನಂತರ ಕಾರು ನಿಂತಿತು. 'ಐದು ನಿಮಿಷಗಳಲ್ಲಿ ಬಂದೆ, ಇಲ್ಲಿಯೇ ಇರಿ' ಎಂದು ಅವ ಹೊರಹೋದ. ಅವನು ಇಳಿದ ತಕ್ಷಣವೇ ಅವನಿಗೆ ಕಾಣದ ಹಾಗೆ ನಾನೂ ಇಳಿದುಕೊಂಡೆ.

'ಹೆವನ್ಲಿ ಲಾಡ್ಜ್' ಎನ್ನುವ ಫಲಕವಿದ್ದ ಹಳೆ ಕಟ್ಟಡ. ಇನ್ನೂ ಕೆಲವು ಕಾರುಗಳು ನಿಂತಿದ್ದವು. ಸುತ್ತ ಕತ್ತಲು. ಜನರ ಸಂಚಲನ ಅಷ್ಟಾಗಿ ಇರಲಿಲ್ಲ, ಬಾಗಿಲ ಬಳಿ ನಿಂತು ಮಾತಾಡುತ್ತಿದ್ದ ಇಬ್ಬರು ಏಮೂವಿನೊಟ್ಟಿಗೆ ಒಳಹೋದರು. ಅವರ ಮುಖದಲ್ಲಿ ಎಮರ್ಜೆನ್ಸಿ ವಿಭಾಗದ ಮುಂದೆ ಕವಿಯುವಂತಹ ಗಾಬರಿ. ಬಹುಶಃ ಕಾಡ್ಗಿಚ್ಚಿನದೇ ಸುದ್ದಿಯಿರಬೇಕು ಅಥವಾ ಅದನ್ನು ದುರುಪಯೋಗ ಪಡಿಸಿಕೊಳ್ಳಲು ಏನು ಹೊಂಚು ಹಾಕುತ್ತಿದ್ದಾರೋ? ಅಲ್ಲಿ ಕಾರು ನಿಲ್ಲಿಸಲು ಏನು ಕಾರಣವಿರಬಹುದು? ಏನೇ ಆದರೂ ಅಲ್ಲಿ ಅಪಾಯ ಕಡಿಮೆ ಎಂದರಿತು ಏಮೂ ವಾಪಸು ಬರಬೇಕಾದರೆ ಅವನ ಕಣ್ಣಿಗೆ ಬೀಳಬಾರದು ಎಂದು ಮರೆಯಲ್ಲಿ ನಿಂತೆ. ಕೆಲವೇ ನಿಮಿಷಗಳಲ್ಲಿ ವಾಪಸು ಬಂದು ಕಾರಿನ ಬಾಗಿಲು ತೆಗೆದು ನನ್ನನ್ನು ಹುಡುಕಿದ. ಮತ್ತೆ ಒಳಗೆ ಓಡಿದ, ಮತ್ತೆ ಅವಸರದಿಂದಲೇ ಓಡೋಡಿ ಬಂದು, ಆಕಡೆ ಈ ಕಡೆ ನೋಡಿ, ಯಾರಿಗೋ ಫೋನ್ ಮಾಡಿ ಮತ್ತೆ ಕಾರು ಹತ್ತಿದ. ಹೊರಟೂ ಹೋದ. ಆ ಕಾರು ಹೊರಟ ಮೇಲೆ ಸ್ವಲ್ಪ ನೆಮ್ಮದಿ ಎನಿಸಿತು. ಉರಿಯುತ್ತಿದ್ದ ಬೆಂಕಿಯಿಂದ, ಅಪರಿಚಿತನ ಕಾರಿನಿಂದ ಪಾರಾಗಿ ನೆಲೆ ತಲುಪಿದ ನೆಮ್ಮದಿ. ಆದರೂ.. ಬೆಳಕು ಮೂಡಲು ಇನ್ನೂ ಮೂರ್ನಾಲ್ಕು ಗಂಟೆಗಳಿದ್ದವು.

'ಹೆವನ್ಲಿ ಲಾಡ್ಜಿಂಗಿನ ಮುಂದೆ ಇದ್ದೇನೆ. ಶೀಘ್ರವಾಗಿ ಕಾರು ಕಳುಹಿಸಿ' ಎಂದು ರಾಂಜಿಗೆ ಮೆಸೇಜು ಕಳುಹಿಸಿದೆ.

ಐದು ನಿಮಿಷ ಕಳೆದರೂ ರಾಂಜಿಯಿಂದ ಉತ್ತರವಿಲ್ಲ. ಕೊರೆಯುವ ಚಳಿ ನನ್ನ ಸ್ವೆಟರನ್ನೂ ತೂರಿಕೊಂಡು ಚುಚ್ಚತೊಡಗಿತು. ಲಾಡ್ಜಿಂಗಿನ ಒಳ ಹೋದೆ. ಬಣ್ಣಗೆಟ್ಟ ಕೌಂಟರಿನಲ್ಲಿ ಯಾರೂ ಇರಲಿಲ್ಲ; ಹಬ್ಬಿದ್ದ ಮುಗ್ಗಲು ವಾಸನೆ, ಮಂದ ದೀಪಗಳು ಭರವಸೆ ಹುಟ್ಟಿಸಲಿಲ್ಲ. ಹೊರಗಿನಷ್ಟು ಚಳಿ ಇರದಿದ್ದರೂ ಬೆಚ್ಚಗೂ ಇರಲಿಲ್ಲ. ಕೌಂಟರಿಗೆ ಯಾರಾದರೂ ಬರಬಹುದು ಎಂದು ಕಾಯತೊಡಗಿದೆ. ರಾಂಜಿಯಿಂದ ಉತ್ತರ ಬಂದು, ನನಗಾಗಿ ಕಾರು ಬರುವವರೆಗೆ ಅಲ್ಲಿ ಕಾಯಬೇಕಿತ್ತು,

'ಅಲ್ಲಿಗೆ ತಲುಪುವ ರಸ್ತೆಗಳನ್ನು ಸಾರ್ವಜನಿಕರಿಗೆ ತಾತ್ಕಾಲಿಕವಾಗಿ ಮುಚ್ಚಿದ್ದಾರೆ. ನೀವಿರುವ ಸ್ಥಳ ಕಾಡ್ಗಿಚ್ಚಿನಿಂದ ಸುರಕ್ಷಿತವಾಗಿದೆ. ನಾನು ಹೇಗಾದರೂ ಮಾಡಿ ಬೆಳಗ್ಗೆ ಸ್ವತಃ ಬರುತ್ತೇನೆ. ನೀವು ದಣಿದಿರಬಹುದು, ವಿಶ್ರಾಂತಿ ತೆಗೆದುಕೊಳ್ಳಿ. ರೂಮು ಸಿಕ್ಕರೆ ಅಲ್ಲಿಯೇ ಉಳಿದುಕೊಳ್ಳಿ.'

ರಾಂಜಿಯ ಉತ್ತರ ಸ್ವಲ್ಪ ನಿರಾಶೆ ತಂದರೂ, ಬೇರೆ ಉಪಾಯವಿರಲಿಲ್ಲ. ಗಡಿಬಿಡಿಯಿಂದ ಹೋಗಿ